ದಿನಾಂಕಃ 20-02-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- 3 ಮತ್ತು 5 ನೇ ಪ್ರತಿವಾದಿ ಪರ ಶ್ರೀ ಜಿ.ಆರ್.ಪಿ ವಕೀಲರಿಂದ

1) ನಿಜಪ್ಪ ಎಂಬುವವರು ನನ್ನ ಅಜ್ಜ. ನಾನು ಹುಟ್ಟುವ ಪೂರ್ವದಲ್ಲಿಯೇ ನನ್ನ ಅಜ್ಜ ಮೃತರಾಗಿರುತ್ತಾರೆ. ನನ್ನ ಅಜ್ಜನಿಗೆ 3 ಜನ ಗಂಡು ಮಕ್ಕಳು ಅವರೆಂದರೆ 1) ಗುರುಪಾದ, 2) ಗುರುಬಸವ ಮತ್ತು 3) ಗುರುಲಿಂಗ ಮತ್ತು ಇಬ್ಬರು ಹೆಣ್ಣು ಮಕ್ಕಳು ಅವರೆಂದರೆ 1) ಅಕ್ಕವ್ವ ಹಾಗೂ 2) ಸಾತವ್ವ . ಸರ್ವೆ ನಂ. 26 ಮೂಲದಲ್ಲಿ ಒಟ್ಟು 16 ಎಕರೆ 34 ಗುಂಟೆ ಜಮೀನು ಇತ್ತು ಎಂದು ತಿಳಿದಿತ್ತು ಎಂದರೆ ಸರಿ. ಸದರಿ 16 ಎಕರೆ 34 ಗುಂಟೆ ಜಮೀನು ವಂಟಮುರಿ ಸರ್ಕಾರ ರವರದ್ದು ಆಗಿತ್ತು ಎಂದರೆ ಸರಿ. ನಮ್ಮ ಅಜ್ಜ ಸದರಿ ಜಮೀನನ್ನು ರೈತ ನಾತೆಯಿಂದ ಮಾಡುತ್ತಿದ್ದರು ಎಂದರೆ ಸರಿ. ಕೂಳು ಕಾಯ್ದೆ ಬಂದ ಕಾಲಕ್ಕೆ ನನ್ನ ಅಜ್ಜ ಜಮೀನನ್ನು ಮಂಜೂರು ಮಾಡುವಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿ ವಿಚಾರಣೆ ಹಂತದಲ್ಲಿ ಇರುವಾಗ ನನ್ನ ಅಜ್ಜ ಮೃತಪಟ್ಟಿದ್ದರು. ನನ್ನ ಅಜ್ಜ ಮೃತನಾದ ನಂತರ ಆತನಿಗೆ ಇದ್ದ ಈ ಮೇಲೆ ಹೇಳಿದ ವಾರಸುದಾರರಿಗೆ ಸದರಿ ಜಮೀನು ಮಂಜೂರು ಆಗಿರುತ್ತದೆ. ಅದರಂತೆ ಪಾರಂ ನಂ. 10 ನ್ನು ಅವರುಗಳ ಹೆಸರಿಗೆ ನೀಡಲಾಗಿದೆ. ಸದರಿ ಮಂಜೂರು ಆದೇಶದಲ್ಲಿ ನನ್ನ ಅಜ್ಜನ ವಾರಸುದಾರರಾದ 5 ಜನರಿಗೂ ಕೂಡ ಸಮನಾಗಿ ತಲಾ 1/5 ಅಂಶದಷ್ಟ ಹಕ್ಕು ಇದೆ ಎಂಬುದಾಗಿ ಆದೇಶ ಇರುತ್ತದೆ ಎಂದರೆ ಸರಿ. ಆ ರೀತಿ ಮಂಜೂರಾದ ನಂತರ ಸದರಿ ಸರ್ವೆ ನಂಬರ 26 ರಲ್ಲಿ ಎಷ್ಟು ಪ್ರತ್ಯೇಕ ಹಿಸ್ಸೆ ಆಗಿದೆ ಎಂದು ನನಗೆ ಗೊತ್ತಿಲ್ಲ.

2) ಅಕ್ಕವ್ವ ಈಕೆಯು ತನ್ನ ಭಾಗದ 1/5 ಅಂಶದ ಹಿಸ್ಸೆಯನ್ನು 3 ನೇ ಪ್ರತಿವಾದಿ ರಾಜು ಚೌಗಲಾ ರವರಿಗೆ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿ. ಅದರಂತೆ ಎಮ್.ಆರ್. ನಂ. ಹೆಚ್ 27 ರಂತೆ ದಿನಾಂಕ 07.08.2013 ರಂದು ಆತನ ಹೆಸರು

ದಾಖಲು ಇರುತ್ತದೆ ಎಂದರೆ ಸರಿ. ಸದರಿ ಡೈರಿ ಆಧಾರದ ಮೇಲೆ 3 ನೇ ಪ್ರತಿವಾದಿಗೆ 3 ಎಕರೆ 14 ಗುಂಟೆ 12 ಆಣೆ 8 ಪೈಸೆ ಜಾಗ ಬಂದಿರುತ್ತದೆ ಎಂದರೆ ಸರಿ. 3 ನೇ ಪ್ರತಿವಾದಿಗೆ ಬಂದ ಜಾಗಕ್ಕೆ ಹೊಸ ಹಿಸ್ಸೆ ನಂಬರ 26/1 ಎಂದು ದಾಖಲು ಆಗಿದೆ ಎಂದರೆ ಸರಿ.

3) ಮುರುಗೇಶ ಈತನು ನನ್ನ ದೊಡ್ಡಪ್ಪನ ಮಗ ಇರುತ್ತಾರೆ. ಆತನ ಹೆಸರಿನಲ್ಲಿ 3 ಎಕರೆ 14 ಗುಂಟೆ 12 ಆಣೆ 8 ಪೈಸೆ ಜಾಗ ದಾಖಲು ಆಗಿದೆ ಎಂದರೆ ಸರಿ. ಅದಕ್ಕೆ ಸರ್ವೆ ನಂ. 26/4 ಎಂದು ಇದೆ ಎಂದರೆ ಸರಿ. ಮುರುಗೇಶನು ತನ್ನ ಸರ್ವೆ ನಂ. 26/4 ನ್ನು 3 ನೇ ಪ್ರತಿವಾದಿ ರಾಜು ಇವನಿಗೆ ನೀಡಿ ಆತನ ಜಮೀನು ಸರ್ವೆ ನಂ. 26/1 ನ್ನು ಅದರ ಬದಲಾಗಿ ತಾನು ಪಡೆದುಕೊಂಡಿದ್ದಾನೆ ಎಂದರೆ ಸರಿ. ಅಸಲು ದಾವೆ ಸಂ. 453/2015 ರಂತೆ ಸಲ್ಲಿಸಿ ಅದರಲ್ಲಿ ರಾಜಿ ಮುಖಾಂತರ ಅವರು ತಮ್ಮ ತಮ್ಮ ಹಿಸ್ಸೆಗಳನ್ನು ಅದಲು ಬದಲು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಅದರಂತೆ ಎಮ್.ಆರ್ ನಂ. ಹೆಚ್ 49 ದಿ. 12.07.2016 ರಂದು ದಾಖಲು ಆಗಿರುತ್ತದೆ ಎಂದರೆ ಸರಿ. ಸರ್ವೆ ನಂ. 26/1 ಮತ್ತು 26/4 ಇವುಗಳ ಉತಾರಗಳನ್ನು ನಾನು ನೋಡಿರುತ್ತೇನೆ.

4) ರಾಜು ಈತನಿಗೆ ಬಂದ ಜಮೀನು ಸರ್ವೆ ನಂ. 26/4 ರಲ್ಲಿ 26/4 ಮತ್ತು 26/5 ಎಂದು ಎರಡು ಹಿಸ್ಸೆ ಆಗಿದೆ ಎಂದರೆ ಸರಿ. ಸದರಿ ಹಿಸ್ಸೆಗಳ ಪೈಕಿ ಸರ್ವೆ ನಂ. 26/4 ಇದು ರಾಜು ರವರಿಗೆ ಹಾಗೂ ಸರ್ವೆ ನಂ. 26/5 ಇದು ನನ್ನ ತಂದೆಯ ಪಾಲಿಗೆ ಬಂದಿದೆ ಎಂದರೆ ಸರಿ. 2013-14 ರಲ್ಲಿ ಸರ್ವೆ ನಂ. 26/1 ಇದು ಅಕ್ಕವ್ವ ರಾಮಪ್ಪ ಅಲಕನೂರು ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ.

5) ನನ್ನ ತಾಯಿ ಈಗ್ಗೆ 24 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. 3 ರಿಂದ 5 ನೇ ಪ್ರತಿವಾದಿಗಳು 1 ಮತ್ತು 2 ನೇ ಪ್ರತಿವಾದಿಗಳ ಮಕ್ಕಳು ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ರಾಜು ಈತನ ತಂದೆಯ ಹೆಸರು ಗುರುಲಿಂಗ ಎಂದು ವಾದ

ಪತ್ರದಲ್ಲಿ ತೋರಿಸಿರುತ್ತೇನೆ ಎಂದರೆ ಸಾಕ್ಷಿಯು ಆತ ಗುರುಲಿಂಗ ಎಂದರೆ 1 ನೇ ಪ್ರತಿವಾದಿಯ ಮಕ್ಕಳು ಎಂದು ನುಡಿಯುತ್ತಾರೆ. 3 ರಿಂದ 5 ನೇ ಪ್ರತಿವಾದಿಗಳು ಸುಶೀಲಾ (2 ನೇ ಪ್ರತಿವಾದಿ) ಇವರ ಮಕ್ಕಳು ಆಗಿರುತ್ತಾರೆ. 2 ನೇ ಪ್ರತಿವಾದಿ ಈರಗೌಡ ಪಾಟೀಲ ಎಂಬುವವನ ಹೆಂಡತಿ ಎಂಬುದಾಗಿ ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಳು ಒಟ್ಟಾಗಿಯೇ ವಾಸ ಮಾಡುತ್ತಿದ್ದಾರೆ ಎಂದರೆ ಸರಿ.

6) 1 ನೇ ಪ್ರತಿವಾದಿಯ ಮಗಳು ಮಂಜುಳಾ ರವರ ಮದುವೆ ಆಗಿರುತ್ತದೆ ಎಂದರೆ ಸರಿ. 5 ನೇ ಪ್ರತಿವಾದಿಯ ಮದುವೆ ಆಗಿರುವುದಿಲ್ಲ. 3 ಮತ್ತು 5 ನೇ ಪ್ರತಿವಾದಿಗಳು 1 ಮತ್ತು 2 ನೇ ಪ್ರತಿವಾದಿಗಳೊಂದಿಗೆ ಕೂಡಿ ವಾಸ ಮಾಡುತ್ತಿರುತ್ತಾರೆ ಎಂದರೆ ಸರಿ.

7) ದಾವಾ ಅನುಸೂಚಿ "ಬಿ" ನಲ್ಲಿ ತೋರಿಸಿರುವ 3 ಆಸ್ತಿಗಳು ಕೂಡ ನಿಜಪ್ಪ ಈತನ ಮಕ್ಕಳ ಹೆಸರಿನಲ್ಲಿ ಇದೆ ಎಂದರೆ ಸರಿ. ನನ ಅಜ್ಜ ನಿಜಪ್ಪ ಈತನು ಜೀವಂತ ಇರುವ ಕಾಲಕ್ಕೆ ಆತ ಮತ್ತು ಆತನ ಮಕ್ಕಳೊಂದಿಗೆ ಯಾವುದಾದರೂ ಪಾಲು ಆಗಿತ್ತೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ "ಬಿ" ನಲ್ಲಿ ಇರುವ ಆಸ್ತಿಗಳಲ್ಲಿ ನನ್ನ ಅಜ್ಜ ಮತ್ತು ಆತನ ಮಕ್ಕಳ ನಡುವೆ ಯಾವುದೇ ಪಾಲು ಆಗಿರುವುದಿಲ್ಲ ಎಂದರೆ ಸರಿ. ನನ್ನ ಅಜ್ಜ ಮೃತರಾದ ನಂತರ ಆತನ ಮಕ್ಕಳ ನಡುವೆ ದಾವಾ ಅನುಸೂಚಿ " ಬಿ" ನಲ್ಲಿ ವಿಭಾಗ ಆಗಿರುವ ಬಗ್ಗೆ ಗೊತ್ತಿಲ್ಲ. ದಾವಾ ಅನುಸೂಚಿ "ಬಿ" ಸ್ವತ್ತಿನ ಉತಾರಗಳನ್ನು ನಾನು ನೋಡಿರುತ್ತೇನೆ. ಸದರಿ ಉತಾರಗಳಲ್ಲಿ ನನ್ನ ಅಜ್ಜನ ಮಕ್ಕಳಿಗೆ ಇಂತಿಷ್ಟೇ ನಿರ್ದಿಷ್ಟ ಪಾಲು ಎಂದು ತೋರಿಸಿರುವುದಿಲ್ಲ ಎಂದರೆ ಸರಿ.

8) ದಾವಾ ಅನುಸೂಚಿ ಎ ಸ್ವತ್ತಿಗೆ ಸಂಬಂದಿಸಿದಂತೆ ನಾನು ಸರ್ವೆ ನಂ. 26/4 ರ ಉತಾರವನ್ನು ಹಾಜರುಪಡಿಸಿರುತ್ತೇನೆ. ಸದರಿ ಉತಾರದಲ್ಲಿ 6 ಎಕರೆ 28 ಗುಂಟೆ 9 ಆಣೆ 6 ಪೈಸೆ ಇದೆ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ಸದರಿ

ಉತಾರದಲ್ಲಿ ಮುರುಗೇಶ ಮತ್ತು ಗುರುಲಿಂಗ ರವರ ಹೆಸರು ಇದೆ ಎಂದರೆ ಸರಿ. ದಾವೆಯಲ್ಲಿ ಸದರಿ ಸರ್ವೆ ನಂ. 26/4 ಇದರ ಚಕ್ಕಬಂದಿಯನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ.

(ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

2 ನೇ ಹೆಚ್ಚುವರಿ ದಿವಾಣಿ ಹಾಗೂ ಪ್ರ.ದ.ನ್ಯಾ ದಂ.ಗಳ
ನ್ಯಾಯಾಲಯ, ಚಿಕ್ಕೋಡಿ.